4. ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಶುದ್ಧವಾದ ಕುಡಿಯುವ ನೀರು ಸರಬರಾಜು

ಶ್ರೀ ಡಿ. ಆರ್. ಪಾಟೀಲ್:– "ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಯ ವಿಷಯ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ. ಈ ವ್ಯವಸ್ಥೆ ಸುಧಾರಿಸಲು ಕೊಳವೆ ಭಾವಿಗಳನ್ನು ಹಾಕಲಾಗಿತ್ತು. ಆದರೆ, ನಂತರ ಈ ಕುಡಿಯುವ ನೀರೂ ಸಹ ಫ್ಲೋರೈಡ್ ಮಿಶ್ರಿತ ನೀರು ಎಂದು ಗೊತ್ತಾಗಿದೆ. ತಿಮ್ಮಾಪುರ ಗ್ರಾಮದ ನಾಗರೀಕರಿಗೆ ಪ್ರತಿನಿತ್ಯ ಫ್ಲೋರೈಡ್ ಇಲ್ಲದ ಶುದ್ಧ ಹಾಗೂ ಸಮರ್ಪಕ ಕುಡಿಯುವ ನೀರು ಪೂರೈಕೆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಹೇಳಿಕೆ ಬಯಸುತ್ತೇನೆ."

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೇ, ನೀರಿನಲ್ಲಿ ಫ್ಲೋರೈಡ್ ಇರುವುದು ನಮಗೆ ಗೊತ್ತಿದೆ. ಲಕ್ಕುಂಡಿ ಹಳ್ಳಿಯು ತಿಮ್ಮಾಪುರದಿಂದ 12ಕಿ.ಮೀ. ದೂರದಲ್ಲಿದೆ. ಅಲ್ಲಿ ನೀರು ಹುಡುಕುತ್ತಾ ಇದ್ದಾರೆ. ಅಲ್ಲಿ ಪೋರ್ಟೆಬಲ್ ವಾಟರ್ ಸಿಕ್ಕರೆ 4 ಕಿ.ಮೀ. ರೈಸ್ ಮಾಡಿ, ನೀರಿನ ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಆರು ತಿಂಗಳಲ್ಲಿ ಪೂರೈಸುತ್ತೇವೆ.

5. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಸುವ್ಯವಸ್ಥಿತವಾಗಿ ಮುಂದುವರಿಯುವ ಬಗ್ಗೆ–

ಶ್ರಿ ಬಿ. ಎಂ. ಇದಿನಬ್ಬ (ಉಳ್ಳಾಲ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಸ್ಥಾಪನೆಯಾಗಿ ಸುಮಾರು 22 ವರ್ಷಗಳಾಯಿತು. ಅದು ಈವರೆಗೂ ಲಾಭ ಗಳಿಸಿಲ್ಲ. ಈ ನಿಗಮಕ್ಕೆ ನಾನಾ ಅಭಿವೃದ್ಧಿಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರ ಹಣ ಒದಗಿಸಿದೆ. ಅದು ಎಷ್ಟೆಂಬುದನ್ನು ತಿಳಿಸಬೇಕು. ಈಗ ನಿಗಮದ ಪರಿಸ್ಥಿತಿ ಏನೂ ಚೆನ್ನಾಗಿಲ್ಲ. ನಿಗಮ ಮುಂದುವರಿಯಲು ಸಾಧ್ಯವಿಲ್ಲವೆ ? ಹಾಗಾದಲ್ಲಿ ಮುಂದಿನ ವ್ಯವಸ್ಥೆ ಏನು ? ಅಲ್ಲಿರುವ ನೌಕರರ ಗತಿ ಏನು ? ಬದಲಿ ವ್ಯವಸ್ಥೆ ಏನಾದರೂ ಮಾಡಲಾಗುವುದೆ ? ಈ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳೇನು ? ಅದರ ಕೂಲಂಕುಶ ತನಿಖೆ ಮಾಡಲಾಗುವುದೆ ? ಮೀನುಗಾರರ ಹಿತಕ್ಕಾಗಿ ಸ್ಥಾಪನೆಗೊಂಡ ಈ ನಿಗಮ ಸುವ್ಯವಸ್ಥಿತವಾಗಿ ಮುಂದುವರಿಯಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವುದು ಅವಶ್ಯಕವಾಗಿರುತ್ತದೆ. ಈ ಕುರಿತು ಮೀನುಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಸಂತ ಪಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇದು 1971ರಂದು ಭಾರತ ಸರ್ಕಾರದ ಕಂಪನಿಗಳ ಕಾಯ್ದೆಯನ್ವಯ ನೋಂದಣಿಯಾಯಿತು.

ಈ ನಿಗಮದ, ಅಧಿಕೃತ ಷೇರು ಬಂಡವಾಳ ರೂ. 3.00 ಕೋಟಿ. ಈ ನಿಗಮಕ್ಕೆ ಸರ್ಕಾರವು ಇದುವರೆಗೆ ಒಂದು ಕೋಟಿ ಹದಿನೈದು ಲಕ್ಷ ರೂಪಾಯಿಗಳನ್ನು ಷೇರು ಬಂಡವಾಳವಾಗಿ ಕೊಟ್ಟಿದೆ. ಮಿಕ್ಕ ಒಂದು ಕೋಟಿ ಹತ್ತು ಲಕ್ಷ ರೂಪಾಯಿಗಳನ್ನು ಮೀನುಗಾರಿಕೆ ಇಲಾಖೆ ನಿರ್ಮಿಸಿದ ಸ್ಥಿರಾಸ್ತಿ ರೂಪದಲ್ಲಿ ವರ್ಗಾಯಿಸಲಾಗಿದೆ. ಭಾರತ ಸರ್ಕಾರವು ಈ ನಿಗಮಕ್ಕೆ ರೂ. 64.50 ಲಕ್ಷಗಳನ್ನು ಕೊಟ್ಟಿದೆ. ಈ ನಿಗಮದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಇದಕ್ಕೆ ಕಾರಣಗಳೇನೆಂದರೆ – ಹಳೆಯದಾದ ಯಂತ್ರೋಪಕರಣಗಳು, ಕಡಿಮೆ ಉತ್ಪಾದನೆ, ಹೆಚ್ಚಿನ ನಿರ್ವಹಣಾ ಮತ್ತು ಸಿಬ್ಬಂದಿ